ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹಿರಿಯೂರು

ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು , ಚಿತ್ರದುರ್ಗ ಜಿಲ್ಲೆ.

ಅಸಲು ದಾವಾ ಸಂಖ್ಯೆ 79/2014

ದಿನಾಂಕಃ 28 ನೇ ಆಗಸ್ಟ್ - 2024.

ವಾದಿಯರು ಃ 1. **ಜಿ. ಹೇಮಾರೆಡ್ಡಿ**
ತಂದೆ ಉಗ್ರಪ್ಪ,
ವಯಸ್ಸು 86 ವರ್ಷ,
ಎಸ್ ಎಲ್ ಆರ್ ಸ್ಟೋರ್,
ಡೋರ್ ನಂ. 69,2 ನೇ ಮೈನ್,
4 ನೇ ಕ್ರಾಸ್, ಶಾಂತಿನಿಕೇತನ
ಶಾಲೆಯ ಹತ್ತಿರ, ಭದ್ರಪ್ಪ
ಲೇಔಟ್, ನಾಗಶೆಟ್ಟಿಹಳ್ಳಿ,
ಬೆಂಗಳೂರು-94.

(ವಾದಿಯರ ಪರವಾಗಿಃ ಶ್ರೀ ಕೆ ವಿ ಡಿ , ವಕೀಲರು)

- ವಿರುದ್ಧ -

ಪ್ರತಿವಾದಿಯರು ಃ 1. **ಶ್ರೀ ಲಕ್ಷ್ಮಿಪತಿಯಪ್ಪ**
**ತಂದೆ ಲೇಟ್ ಉಗ್ರಪ್ಪ**
**ಮತ್ತು ಇತರರು.**

( ಪ್ರತಿವಾದಿ 1(ಬಿ) ರಿಂದ 1(ಡಿ) ರ ಪರವಾಗಿ ಶ್ರೀ ಬಿ ಎಲ್ ಎಸ್ ವಕೀಲರು )
(ಪ್ರತಿವಾದಿ 1(ಇ) ಶ್ರೀ ಸಿ ಕೆ ವಕೀಲರು)
(2 ನೇ ಪ್ರತಿವಾದಿಯರ ಪರಃ ಶ್ರೀ ಎಸ್ ಜಿ. ವಕೀಲರು)
(4 ನೇ ಪ್ರತಿವಾದಿಯರ ಪರಃ ಶ್ರೀ ಟಿ ಡಿ ಕೆ. ವಕೀಲರು)
(ಪ್ರಸ್ತಾವಿತ 5 ನೇ ಪ್ರತಿವಾದಿಯರ ಪರಃ ಶ್ರೀ ಟಿ ಎಸ್ ವಕೀಲರು)

ಮಧ್ಯಂತರ ಅರ್ಜಿ ಸಂಖ್ಯೆ-12 ರ ಪಕ್ಷಗಾರರು

ಅರ್ಜಿದಾರರು /
ವಾದಿಯರು ಃ ಜಿ. ಹೇಮಾರೆಡ್ಡಿ

- ವಿರುದ್ಧ -

ಎದುರುದಾರರು / ಪ್ರತಿವಾದಿಯರು ಃ ಶ್ರೀ ಲಕ್ಷ್ಮಿಪತಿಯಪ್ಪ ಮತ್ತು ಇತರರು.

ಪ್ರಸಾವಿತ ಪ್ರತಿವಾದಿಯರು ಃ5. ತಹಶೀಲ್ದಾರ್,
ಹಿರಿಯೂರು ತಾಲ್ಲೂಕು,
ಹಿರಿಯೂರು.

## ಮಧ್ಯಂತರ ಅರ್ಜಿ ಸಂಖ್ಯೆ-12 ರ ಮೇಲಿನ ಆದೇಶ

ಅರ್ಜಿದಾರರು / ವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ-12 ನ್ನು ಕ್ರಮಾದೇಶ 1 ನಿಯಮ 10(2)ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಪ್ರಸಾವಿತ ಪ್ರತಿವಾದಿಯವರನ್ನು ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡುವಂತೆ ಕೋರಿಕೊಂಡಿರುತ್ತಾರೆ. ಪ್ರತಿ*ವಾದಿಯರ ಮುಂದುವರೆದು ಮುಖ್ಯ ವಿಚಾರಣೆಗಾಗಿ ನಿಗಧಿಪಡಿಸಿದ ಸಮಯದಲ್ಲಿ ವಾದಿಯರು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.*

2. ಮಧ್ಯಂತರ ಅರ್ಜಿಗೆ ಪೂರಕವಾಗಿ ಅರ್ಜಿದಾರರು / 1 ನೇ ವಾದಿಯು ಪ್ರಮಾಣ ಪತ್ರವನ್ನು ಸಲ್ಲಿಸಿ ಪ್ರಸ್ತಾವಿತ ಪ್ರತಿವಾದಿಯವರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿದ್ದು ಈ ದಾವೆ ತೀರ್ಮಾನಕ್ಕೆ ಬರಲು ಅವರ ಅವಶ್ಯಕತೆ ಇದೆ ಎಂದು ಅವರನ್ನು ಪಕ್ಷಗಾರರನ್ನಾಗಿ ಸೇರಿಸಬೇಕೆಂದು ಕೋರಿಕೊಂಡಿರುತ್ತಾರೆ.

3. ನೋಟಿಸ್ ಜಾರಿಯಾಗಿ ಪ್ರಸ್ತಾವಿತ 5 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಕೂಡ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

4. ವಾದವನ್ನು ಆಲಿಸಲಾಯಿತು.

5. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುವ ಅಂಶಗಳುಃ-

**1.** ಅರ್ಜಿದಾರರು ಪ್ರಸಾವಿತ ಪ್ರತಿವಾದಿಯರ ಹಾಜರಾತಿಯು ಈ ದಾವೆಯಲ್ಲಿ ತೀರ್ಮಾನಕ್ಕೆ ಬರಲು ಅವಶ್ಯಕತೆ ಇದೆ ಎಂಬುದಕ್ಕೆ ಸಕಾರಣಗಳನ್ನು ನೀಡಿರುತ್ತಾರೆಯೇ?

**2.** ಯಾವ ಆದೇಶ?

<u>ಕಾ ರ ಣ ಗ ಳು</u>

6. <u>ಅಂಶ-1</u>ಃ ವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ-12 ನ್ನು ಕ್ರಮಾದೇಶ 1 ನಿಯಮ 10(2)ರಡಿಯಲ್ಲಿ ಸಲ್ಲಿಸಿ, ಪ್ರಸ್ತಾವಿತ ಪ್ರತಿವಾದಿಯವರನ್ನು ಈ ದಾವೆಯಲ್ಲಿ ಸೇರಿಸಬೇಕೆಂದು ಕೋರಿಕೊಂಡಿರುತ್ತಾರೆ. ವಾದಿಯರ ಪ್ರಕಾರ, ಪ್ರಸ್ತಾವಿತ ಪ್ರತಿವಾದಿ- 5 ರವರು ಅವಶ್ಯಕ ಪಕ್ಷಗಾರರಾಗಿದ್ದು ದಾವೆಯ ಸಲ್ಲಿಸುವ ಸಮಯದಲ್ಲಿ ಕಣ್ಣ ತಪ್ಪಿ ನಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಖಂಡನೆ ತೆಗೆದುಕೊಂಡಿದ್ದು ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಪಾಲು ವಿಭಜನೆಯನ್ನು ಕೋರಿ ಸಲ್ಲಿಸಿದ್ದು ಪ್ರಸ್ತಾವಿತ ಪ್ರತಿವಾದಿಯರಾದ ತಹಶೀಲ್ದಾರರ ವಿರುದ್ಧ ಯಾವುದೇ ಪರಿಹಾರವನ್ನು ಕೋರಿರುವುದಿಲ್ಲ. ವಾದಿಯು ಎಲ್ಲಿಯೂ ಕೂಡ ಪ್ರಸ್ತಾವಿತ ಪ್ರತಿವಾದಿಯವರು ಅವರ ಕುಟುಂಬದ ಸದಸ್ಯರೆಂದು ಹಾಗೂ ಅವರ ಪ್ರಮಾಣ ಪತ್ರದಲ್ಲಿ ಯಾವ ಕಾರಣದಿಂದ ಅವರು ಪ್ರಸ್ತಾವಿತ ಪ್ರತಿವಾದಿಯವರ ಹಾಜರಾತಿ ಈ ದಾವೆಯಲ್ಲಿ ತೀರ್ಮಾನಕ್ಕೆ ಬರುವಾಗ ಅವಶ್ಯಕತೆ ಇದೆ ಎನ್ನುವ ಬಗ್ಗೆ ಯಾವುದೇ ವಿವರಣೆ ಕೊಟ್ಟಿರುವುದಿಲ್ಲ.

7. ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10(2) ರಲ್ಲಿ ಈ ಕೆಳಕಂಡಂತೆ ಉಲ್ಲೇಖವಿರುತ್ತದೆಃ-

2) <u>*ನ್ಯಾಯಾಲಯವು ಪಕ್ಷಕಾರರನ್ನು ತೆಗೆದು ಹಾಕಬಹುದು ಅಥವಾ ಸೇರಿಸಬಹುದು (Court may strike out or add parties)*</u> *"ಯಾವನೇ ಪಕ್ಷಕಾರನ ಅರ್ಜಿಯ ಮೇಲೆ ಅಥವಾ ಅದಿಲ್ಲದೇ ಮತ್ತು ನ್ಯಾಯಾಲಯಕ್ಕೆ ನ್ಯಾಯೋಚಿತವೆಂದು*

*ತೋರಬಹುದಾದಂಥ ನಿಬಂಧನೆಗಳ ಮೇಲೆ, ವಾದಿಯಾಗಿ ಅಥವಾ ಪ್ರತಿವಾದಿಯಾಗಿ ಅನುಚಿತವಾಗಿ ಸೇರಿಸಲಾದ ಯಾವನೇ ಪಕ್ಷಕಾರನ ಹೆಸರನ್ನು ತೆಗೆದು ಹಾಕಬೇಕೆಂದು, ಮತ್ತು ವಾದಿಯಾಗಿ ಅಥವಾ ಪ್ರತಿವಾದಿಯಾಗಿ ಸೇರಿಸಬೇಕಾಗಿದ್ದ ಅಥವಾ ಆ ದಾವೆಯಲ್ಲಿ ಒಳಗೊಂಡ ಎಲ್ಲಾ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಮತ್ತು ಸಂಪೂರ್ಣವಾಗಿ ನ್ಯಾಯ ನಿರ್ಣಯಿಸಲು ಮತ್ತು ಇತ್ಯರ್ಥಗೊಳಿಸಲು ನ್ಯಾಯಾಲಯಕ್ಕೆ ಸಾಧ್ಯವಾಗುವಂತೆ ಮಾಡುವುದಕ್ಕಾಗಿ ನ್ಯಾಯಾಲಯದಲ್ಲಿ ಯಾರ ಹಾಜರಾತಿಯು ಅವಶ್ಯವೆನಿಸಬಹುದೋ ಆ ಯಾವನೇ ವ್ಯಕ್ತಿಯ ಹೆಸರನ್ನು ಸೇರಿಸಬೇಕೆಂದು ವ್ಯವಹರಣೆಯ ಯಾವುದೇ ಹಂತದಲ್ಲಿ ನ್ಯಾಯಾಲಯವು ಆದೇಶಿಸಬಹುದು".*

8. ಪ್ರಸ್ತಾವಿತ ಪ್ರತಿವಾದಿಯರು ಸರ್ಕಾರಿ ನೌಕರರಾಗಿದ್ದು, ಈ ದಾವೆಯಲ್ಲಿರುವಂತಹ ಎಲ್ಲಾ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಮತ್ತು ಸಂಪೂರ್ಣವಾಗಿ ನ್ಯಾಯ ನಿರ್ಣಯಿಸಲು ಪ್ರಸ್ತಾವಿತ ಪ್ರತಿವಾದಿಯರ ಹಾಜರಾತಿಯ ಅವಶ್ಯಕತೆ ಇರುವುದಿಲ್ಲ. ಅಲ್ಲದೇ ಪ್ರಸ್ತಾವಿತ ಪ್ರತಿವಾದಿಯವರು ತಮ್ಮ ಕರ್ತವ್ಯ ಅವಧಿಯಲ್ಲಿ ಯಾವುದಾದರೂ ಆದೇಶ ಮಾಡಿದ್ದಲ್ಲಿ ಕಾನೂನಿನ ಅಡಿಯಲ್ಲಿ ಅವಕಾಶವಿದ್ದಲ್ಲಿ ಅದನ್ನು ಪ್ರಶ್ನಿಸುವ ಅವಕಾಶ ಉಭಯ ಪಕ್ಷಗಾರರಿಗೂ ಕೂಡ ಇದ್ದಿರುತ್ತದೆ. ಆದರೆ ಈ ದಾವೆಯಲ್ಲಿ ತೀರ್ಮಾನಕ್ಕೆ ಬರುವಾಗ ಖಂಡಿತವಾಗಿಯೂ ಪ್ರಸ್ತಾವಿತ ಪ್ರತಿವಾದಿಯರ ಹಾಜರಾತಿಯ ಅವಶ್ಯಕತೆ ಇರುವುದಿಲ್ಲವೆಂದು ತೀರ್ಮಾನಿಸಿ, ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

9. <u>ಅಂಶ-2</u>- ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

<u>ಆದೇಶ</u>

ಅರ್ಜಿದಾರರು / ವಾದಿಯರು ಸಲ್ಲಿಸಿದಂತಹ ಮಧ್ಯಂತರ ಅರ್ಜಿ-12, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ

10(2) ಸಹಕಲಂ 151 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ , ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ 28 ನೇ ಆಗಸ್ಟ್-2024 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು .

The defendant No.1(a) to (c) filed IA NO.13 U.O 8 R. 1(3) R/W Sec. 151 of CPC along with copy of 2 documents and prayed to permit them to produce the documents. The plaintiff has not filed any objection.

Heard. The plaintiff filed this suit against the defendants for partition and separate possession. Along with the application the defendants have produced copy of relinquishment deed and gift deed. At the time of the receiving the documents the court need not be looked into the genuineness of the documents. Hence, considering the facts and circumstances, it is fit case to allow the application. Accordingly I proceed to pass the following:

ORDER

IA.No.13 filed the defendant No.1(a) to (c) is hereby allowed. Documents taken into

file. Further chief of DW.1 call on 03.09.2024.

Sr. Civil Judge & JMFC.

Hiriyur.